
SPVVS'S

# G. P. PORWAL ARTS, COMMERCE & V. V. SALIMATH SCIENCE COLLEGE SINDGI

## DEPT OF ECONOMICS

**2022-23**

## PROJECT WORK




# Mixed Economy


**Submitted By**

**Ku. Ishwari Joshi & Mananda Gadad**

**Dept of Economics**

B.Com. I Sem

Reg No: U15NB22C0031

U15NB22C0009


**Submitted to**

**Sri. Basavaraj R. Mahajanashetti**

**Dept of Economics**

**GPP & VVS College Sindgi**

Coordinator IQAC
G. P. PORWAL ARTS, COM &
V. V. SALIMATH Sc. College,
SINDGI-586128.

Principal,
G. P. Porwal Arts, Comm &
V. V. Salimath Sc. College
SINDGI-586128. College Code: 323

SPVVS'S

# G. P. PORWAL ARTS, COMMERCE & V. V. SALIMATH SCIENCE COLLEGE SINDGI - 586 128

## DEPARTMENT OF ECONOMICS

# CERTIFICATE

Register No: **U15NB22C0031** Class: **B.Com. I Sem**
**U15NB22C0009**

This is to certify that, Mr/Mrs. *Ishwari Johi & Mananda Gadad* are satisfactorily completed Project/Seminar work on **"Mixed Economy"** under my supervision in G. P. Porwal Arts, Commerce and V. V. Salimath Science College Sindagi. Year 2022-23

**Sri. Basavaraj R. Mahajanashetti**
**Dept of Economics**
**GPP & VVS College Sindgi**

HOD
**Dr. Prakash Rathod**
**Dept of Economics**
**GPP & VVS College Sindgi**

Coordinator IQAC
G. P. PORWAL ARTS, COM &
V. V. SALIMATH Sc. College,
SINDGI-586128.

Principal,
G. P. Porwal Arts, Comm &
V. V. Salimath Sc. College
SINDGI-586128. College Code: 5234

Head
Dept. of Economics
G.P.P. Arts, Commerce & V.V.S. Science
College, SINDAGI-586128.

# Index



| Sr. NO | Title | Page NO |
| --- | --- | --- |
| 01 | Introduction to mixed Economy | 1-3 |
| 02 | Features of mixed economy | 4-7 |
| 03 | Advantages of mixed economy | 7-8 |
| 04 | Conclusion | 8-9 |

# ಮಿಶ್ರ ಆರ್ಥಿಕತೆ

ಅರ್ಥ :

ಮಿಶ್ರ ಅರ್ಥವ್ಯವಸ್ಥೆಯು ಬಂಡವಾಳಶಾಹಿ ಮತ್ತು ಸಮಾಜವಾದಿ ಪದ್ಧತಿಗಳ ಮಿಶ್ರಣವಾಗಿದೆ. ಆಧುನಿಕ ಯುಗದಲ್ಲಿ ಬಹುತೇಕ ರಾಷ್ಟ್ರಗಳಲ್ಲಿ ಅತಿರೇಕದ ಬಂಡವಾಳದ ಅಥವಾ ಸಮಾಜವಾದಕ್ಕೆ ಬದಲಾಗಿ ಈ ಎರಡೂ ಪದ್ಧತಿಗಳು ಯಾವುದೇ ಒಂದು ಪ್ರಮಾಣದಲ್ಲಿ ಒಂದುಗೂಡಿರುವಂತಹ ವ್ಯವಸ್ಥೆಯು ಅಸ್ತಿತ್ವದಲ್ಲಿದೆ. ಮಿಶ್ರ ಅರ್ಥವ್ಯವಸ್ಥೆಯಲ್ಲಿ ಬಂಡವಾಳವಾದ ಮತ್ತು ಸಮಾಜದ ಎರಡೂ ಪದ್ಧತಿಗಳ ಲಕ್ಷಣಗಳು ಅಡಕವಾಗಿರುತ್ತವೆ.

ಮಿಶ್ರ ಆರ್ಥಿಕತೆಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರಗಳೆರಡೂ ಕಾರ್ಯಾಚರಣೆಯಲ್ಲಿರುತ್ತವೆ. ಕೆಲವು ಕೈಗಾರಿಕೆಗಳು ಸರ್ಕಾರದ (ಸಾರ್ವಜನಿಕ ಕ್ಷೇತ್ರದ) ಒಡೆತನ ಮತ್ತು ನಿರ್ವಹಣೆಗೆ ಒಳಪಟ್ಟಿದ್ದರೆ ಇನ್ನು ಕೆಲವು ಕೈಗಾರಿಕೆಗಳು ಖಾಸಗಿ ವ್ಯಕ್ತಿಗಳ ಒಡೆತನ ಮತ್ತು ನಿರ್ವಹಣೆಗೆ ಒಳಪಟ್ಟಿರುತ್ತವೆ. ಸಾರ್ವಜನಿಕ ಮತ್ತು ಖಾಸಗಿ ವಲಯಗಳೆರಡರ ಕಾರ್ಯಕ್ಷೇತ್ರಗಳನ್ನು ಸ್ಪಷ್ಟವಾಗಿ ವಿಂಗಡಿಸಲಾಗಿರುತ್ತದೆ. ಯಾವ ಉದ್ಯಮ ಅಥವಾ ಕ್ಷೇತ್ರವು ಸರ್ಕಾರದ ಒಡೆತನದಲ್ಲಿರಬೇಕು ಮತ್ತು ಯಾವುದು ಖಾಸಗಿ ಕ್ಷೇತ್ರದ ಒಡೆತನದಲ್ಲಿರಬೇಕು ಎಂಬುದನ್ನು ಸರ್ಕಾರವೇ ನಿರ್ಧರಿಸಿ ನೀತಿ-ನಿರ್ಣಯಗಳನ್ನು ಹೊರಡಿಸುತ್ತದೆ. ಮಿಶ್ರ ಆರ್ಥಿಕತೆಯಲ್ಲಿ ಖಾಸಗಿ ಉದ್ಯಮವು ಮುಕ್ತವಾಗಿ ಮತ್ತು ಅನಿಯಂತ್ರಿತವಾಗಿ ಕಾರ್ಯಾಚರಣೆ ಮಾಡುವಂತಿರುವುದಿಲ್ಲ. ಸರ್ಕಾರವು ಮಧ್ಯಪ್ರವೇಶಿಸಿ ಖಾಸಗಿ ಉದ್ಯಮವನ್ನು ನಿಯಂತ್ರಿಸುತ್ತದೆ ಮತ್ತು ಅದಕ್ಕೆ ನಿರ್ದೇಶನಗಳನ್ನು ನೀಡುತ್ತದೆ.

ಭಾರತವು ಮಿಶ್ರ ಅರ್ಥವ್ಯವಸ್ಥೆಗೆ ಪ್ರಮುಖವಾಗಿ ಉದಾಹರಣೆಯಾಗಿದೆ. ಅಮೆರಿಕ, ಇಂಗ್ಲೆಂಡ್ ಮುಂತಾದ ಬಂಡವಾಳಶಾಹಿ ರಾಷ್ಟ್ರಗಳೂ ಸಹ ಇತ್ತೀಚಿನ ದಿನಗಳಲ್ಲಿ ಮಿಶ್ರ ಆರ್ಥಿಕ ಪದ್ಧತಿಯತ್ತ ವಾಲುತ್ತಿವೆ.

ಭಾರತವು ಈಗ ಮಿಶ್ರ ಆರ್ಥಿಕ ವ್ಯವಸ್ಥೆಯನ್ನು ಹೊಂದಿದೆ. ಭಾರತದ ಮಿಶ್ರ ಅರ್ಥವ್ಯವಸ್ಥೆಯ ಬೀಜಾಂಕುರಗಳನ್ನು ಬ್ರಿಟಿಷರ ಆಳ್ವಿಕೆಯ ಅವಧಿಯಲ್ಲಿಯೇ ಕಾಣಬಹುದಾಗಿದೆ. ಆಗ ಚಹಾ ತೋಟಗಳು, ಸೆಣಬು, ಕಲ್ಲಿದ್ದಲು, ಚಿನ್ನದ ಗಣಿಗಾರಿಕೆ ಮುಂತಾದ ಉದ್ಯಮಗಳಿಗೆ ಬ್ರಿಟನ್ನಿನ ಬಂಡವಾಳವು ಪ್ರವಹಿಸುತ್ತಿತ್ತು. ಈ ಉದ್ಯಮಗಳ ಬೆಳವಣಿಗೆಯ ದೃಷ್ಟಿಯಿಂದ ಸರ್ಕಾರವು ರೈಲು ಸಾರಿಗೆ, ಲೋಕೋಪಯೋಗಿ ಕಾಮಗಾರಿಗಳು ಮೊದಲಾದ ಸಾಮಾಜಿಕ ಮೂಲಸೌಕರ್ಯದ ಬಂಡವಾಳದ ಮೇಲೆ ಹೆಚ್ಚಿನ ಹೂಡಿಕೆಯನ್ನು ಕೈಗೊಂಡಿತು. ಅಂದರೆ ಬಂಡವಾಳ ಹೂಡಿಕೆಯ ಹೆಚ್ಚಳದೊಂದಿಗೆ ಖಾಸಗಿ ಮತ್ತು ಸಾರ್ವಜನಿಕ ಉದ್ಯಮಗಳು ಬೆಳೆದವು. ಅಂತೆಯೇ ಉದ್ಯಮದ ಅಭಿವೃದ್ಧಿಯಲ್ಲಿ ಸರ್ಕಾರದ ಪಾತ್ರವು ಜಾಸ್ತಿಯಾಯಿತು.

ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಮಿಶ್ರ ಆರ್ಥಿಕ ವ್ಯವಸ್ಥೆಯನ್ನು ಆರ್ಥಿಕ ಅಭಿವೃದ್ಧಿಯ ಒಂದು ಸಾಧನವನ್ನಾಗಿ ಬಳಸಿಕೊಳ್ಳಲಾಯಿತು.

ಭಾರತದ ಸಂವಿಧಾನ, ಪಂಚವಾರ್ಷಿಕ ಯೋಜನೆಗಳ ಪ್ರಸ್ತಾವನೆಗಳು, ಕೈಗಾರಿಕಾ ನೀತಿ ಮೊದಲಾದ ಅಧಿಕೃತ ದಾಖಲೆಗಳಲ್ಲಿ ಭಾರತದಲ್ಲಿ ಮಿಶ್ರ ಅರ್ಥವ್ಯವಸ್ಥೆಯ ಬೆಳವಣಿಗೆಯನ್ನು ಕುರಿತ ಭಾವನೆಗಳು ಅಡಕವಾಗಿವೆ.

ರಾಷ್ಟ್ರದ ಸರ್ವತೋಮುಖ ಆರ್ಥಿಕಾಭಿವೃದ್ಧಿಯ ಸಾಧನೆಯು ಅತ್ಯಂತ ಮುಖ್ಯ ಸಂಗತಿಯಾಗಿದೆ. ಅಂತೆಯೇ ಸಂವಿಧಾನದಲ್ಲಿ ಉಲ್ಲೇಖಿಸಲಾಗಿರುವಂತೆ ಜನರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ಒದಗಿಸಬೇಕು. ಈ ಅಂಶಗಳೇ ಮಿಶ್ರ ಆರ್ಥವ್ಯವಸ್ಥೆಯಲ್ಲಿ ಅನಿವಾರ್ಯತೆಯನ್ನು ಒತ್ತಿ ಹೇಳುತ್ತವೆ. ಆರ್ಥಿಕಾಭಿವೃದ್ಧಿಯ ಸಾಧನೆಗಾಗಿ ಬಂಡವಾಳ ಹೂಡಿಕೆ ಹೆಚ್ಚಾಗಬೇಕಾಗುತ್ತದೆ. ಇನ್ನೊಂದು ಕಡೆ, ಸಾಮಾಜಿಕ ನ್ಯಾಯ ಸ್ಥಾಪನೆ ಮತ್ತು ಎಲ್ಲರಿಗೂ ಸಮಾನ ಅವಕಾಶಗಳ ಕಲ್ಪನೆಗೆ ಸರ್ಕಾರದ ನೇರ ಕಾರ್ಯಾಚರಣೆ ಅಗತ್ಯವಾಗಿದೆ.

ಭಾರತದಲ್ಲಿ ಮಿಶ್ರ ಆರ್ಥಿಕ ವ್ಯವಸ್ಥೆಯ ಬೆಳವಣಿಗೆಗೆ ಕಾರಣವಾಗಿರುವ ಪ್ರಮುಖ ಅಂಶಗಳು :

1) ಆರ್ಥಿಕ ಮತ್ತು ಸಾಮಾಜಿಕ ಸಮಾನತೆಯ ಸಾಧನೆ : ಭಾರತವು ಪ್ರಜಾಸತ್ತಾತ್ಮಕ ಸಮಾಜವಾದಿ ವ್ಯವಸ್ಥೆಯ ರಾಷ್ಟ್ರವಾಗಿದೆ. ಆರ್ಥಿಕ ಮತ್ತು ಸಾಮಾಜಿಕ ಸಮಾನತೆಯ ಸಾಧನೆಯು ಇಂತಹ ವ್ಯವಸ್ಥೆಯಲ್ಲಿ ಅತಿ ಮುಖ್ಯ ಸಂಗತಿಯಾಗಿರುತ್ತದೆ. ದೇಶದಲ್ಲಿ ಸಮಾಜವಾದಿ ರಚನೆಯ ಸಮಾಜವನ್ನು ಸ್ಥಾಪಿಸುವುದೇ ಸಾಮಾಜಿಕ ಸಮಾನತೆಯನ್ನು ಸಾಧಿಸಲು ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳಬೇಕಾಗುತ್ತದೆ.

2) ಪ್ರಾದೇಶಿಕ ಅಸಮತೆಗಳ ನಿರ್ಮೂಲನ : ಪ್ರಾದೇಶಿಕ ಅಸಮತೋಲನ ಸಾಮಾಜಿಕ ಮತ್ತು ರಾಜಕೀಯ ಘರ್ಷಣೆಗಳಿಗೆ ಒಂದು ಪ್ರಬಲ ಕಾರಣವಾಗಿರುತ್ತದೆ. ದೇಶದ ಎಲ್ಲಾ ಭಾಗಗಳು ಮತ್ತು ಪ್ರದೇಶಗಳು ಸಮಾನವಾಗಿ ಅಭಿವೃದ್ಧಿ ಹೊಂದಿದಾಗ ಈ ಸಮಸ್ಯೆಯು ಉದ್ಭವಿಸುವುದಿಲ್ಲ.

3) ಆರ್ಥಿಕ ಶಕ್ತಿಯ ಕೇಂದ್ರೀಕರಣವನ್ನು ತಡೆಗಟ್ಟುವಿಕೆ : ಆರ್ಥಿಕ ಶಕ್ತಿಯ ಕೇಂದ್ರೀಕರಣವು ರಾಷ್ಟ್ರೀಯ ಉತ್ಪನ್ನದ ಸಮಾನ ವಿತರಣೆಯನ್ನು ತಡೆಗಟ್ಟುತ್ತದೆ. ಸಂಪತ್ತು ಲಾಭ ಸಂಪಾದನೆಯ ಮೂಲಗಳು, ಮೊದಲಾದವು ಕೆಲವೇ ಜನರಲ್ಲಿ ಕೇಂದ್ರೀಕೃತವಾದರೆ ಅದರಿಂದ ಏಕಸ್ವಾಮ್ಯಾಧಿಕಾರವು ಬೆಳೆಯುತ್ತದೆ. ಅಂತೆಯೇ ಅದು ಸ್ವಹಿತಾಸಕ್ತಿಗಳ ಬೆಳವಣಿಗೆಗೆ ಅವಕಾಶವನ್ನು ಕಲ್ಪಿಸುತ್ತದೆ.

4) ದುರ್ಬಲ ವರ್ಗಗಳ ಜನರಿಗೆ ವಿಶೇಷ ನೆರವು ನೀಡಿಕೆ :

ಸಮಾಜದಲ್ಲಿ ದುರ್ಬಲ ಮತ್ತು ಅಶಕ್ತ ವರ್ಗಗಳ ಜನರಿಗೆ ಆಹಾರ, ವಸತಿ, ಕುಡಿಯುವ ನೀರು ಮೊದಲಾದ ಕನಿಷ್ಠ ಅವಶ್ಯಕತೆಗಳನ್ನು ಒದಗಿಸಬೇಕಾದ ಜವಾಬ್ದಾರಿ ಸರ್ಕಾರದ ಮೇಲಿದೆ. ಅಲ್ಲದೆ ಜನರ ಕ್ಷೇಮಾಭಿವೃದ್ಧಿಗಾಗಿ ಅದು ಶಿಕ್ಷಣ, ಆರೋಗ್ಯ, ಉದ್ಯೋಗ ಮೊದಲಾದ ಸೌಲಭ್ಯಗಳನ್ನು ಒದಗಿಸಬೇಕಾಗಿದೆ. ಅರ್ಥವ್ಯವಸ್ಥೆಯಲ್ಲಿ ಸರ್ಕಾರವು ಕ್ರಿಯಾಶೀಲ ಪಾತ್ರವನ್ನು ವಹಿಸಿದಾಗ ಮಾತ್ರ ಈ ಕಾರ್ಯಗಳನ್ನು ಸಾಧಿಸಲು ಸಾಧ್ಯವಿರುತ್ತದೆ.

5) ಔದ್ಯಮಿಕ ಅಭಿವೃದ್ಧಿಯ ಅವಶ್ಯಕತೆ :

ರಾಷ್ಟ್ರದ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಕೈಗಾರಿಕಾ ಪ್ರಗತಿಯು ಅವಶ್ಯವಾದುದು. ಕೈಗಾರಿಕಾಭಿವೃದ್ಧಿಯನ್ನು ಸಾಧಿಸುವ ಉದ್ದೇಶದಿಂದ ಖಾಸಗಿ ವಲಯಕ್ಕೆ ಸರ್ಕಾರ ಉತ್ತೇಜನವನ್ನು ನೀಡಬೇಕಾಗುತ್ತದೆ. ಬ್ರಿಟನ್, ಅಮೇರಿಕ ಮುಂತಾದ ದೇಶಗಳಲ್ಲಿ ಖಾಸಗಿ ಉದ್ಯಮದ ಮೂಲಕವೇ ಕೈಗಾರಿಕಾ ಪ್ರಗತಿ ಮತ್ತು ಆರ್ಥಿಕಾಭಿವೃದ್ಧಿ ಸಾಧನೆಯಾಗಿರುವುದು ಗಮನಕ್ಕೆ ಬರುತ್ತದೆ.

## ಮಿಶ್ರ ಆರ್ಥಿಕತೆಯ ಲಕ್ಷಣಗಳು:-

ಮಿಶ್ರ ಆರ್ಥಿಕತೆಯು ಕೆಲವೊಂದು ಗುಣಲಕ್ಷಣಗಳನ್ನು ಹೊಂದಿರುತ್ತದೆ. ಅವುಗಳು ಈ ಕೆಳಗಿನಂತಿರುತ್ತವೆ.

1) ಎಲ್ಲಾ ವಲಯಗಳ ಸಹ ಅಸ್ತಿತ್ವ:-

ಮಿಶ್ರ ಆರ್ಥಿಕತೆಯಲ್ಲಿ ಸರ್ಕಾರಿ, ಖಾಸಗಿ ಮತ್ತು ಜಂಟಿ ವಲಯದ ಸಹಬಾಳ್ವೆಯಾಗಿ ಸಹ ಅಸ್ತಿತ್ವ ಹೊಂದಿರುತ್ತವೆ. ಅವುಗಳೆಲ್ಲದರ ಪಾತ್ರವನ್ನು ಸಹಜವಾಗಿ ವ್ಯಾಖ್ಯಾನಿಸಲಾಗುತ್ತದೆ. ಯಾವ್ಯಾವ ವಲಯಗಳು ಎಲ್ಲೆಲ್ಲಿ ಭಾಗಿಯಾಗಬೇಕು ಎಂಬುದನ್ನು ಮುಂಚಿತವಾಗಿಯೇ ತಿಳಿಸಲಾಗುತ್ತದೆ.

2) ಬೆಲೆಯಂತ್ರದ ಪಾತ್ರ:-

ಮಿಶ್ರ ಆರ್ಥಿಕತೆಯಲ್ಲಿ ಬೆಲೆಯಂತ್ರದ ಅಸ್ತಿತ್ವವಿರುತ್ತದೆ. ಆದರೆ ಪಾತ್ರ ನಿಯಂತ್ರಿತ ರೂಪದಲ್ಲಿರುತ್ತದೆ. ಬಂಡವಾಳಶಾಹಿ ಆರ್ಥಿಕತೆಯಲ್ಲಿ ಇದ್ದಂತೆ ಮುಕ್ತ ಇರುವುದಿಲ್ಲ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಪ್ರತಿಯೊಂದು ಬೆಳವಣಿಗೆಗೆ ಬೆಲೆಯಂತ್ರವು ಮಾರ್ಗದರ್ಶನ ನೀಡುತ್ತಿರುತ್ತದೆ. ಆದರೆ ಮಿಶ್ರ ಆರ್ಥಿಕತೆಯಲ್ಲಿ ಬೆಲೆಯಂತ್ರವು ಸರ್ಕಾರದ ನಿಯಂತ್ರಣ ಮತ್ತು ಹತೋಟಿಗೆ ಒಳಪಡಿಸಲಾಗುತ್ತದೆ.

3) ಸಹಕಾರಿ ವಲಯ:-

ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಇನ್ನೊಂದು ವಲಯವು ಕಾಣಿಸಿಕೊಳ್ಳುತ್ತದೆ.

ಅದು ಸಹಜವಾಗಿ ವಿಳಂಬವಾಗಿರುತ್ತದೆ. ಈ ವಿಳಂಬಕ್ಕೆ ಸರ್ಕಾರದ ಬೆಂಬಲ ಮತ್ತು ನೆರವು ಲಭ್ಯವಾಗುತ್ತಿರುತ್ತದೆ.

4] ಅನುಭೋಗಿಕ ಸಾರ್ವಭೌಮತ್ವದ ರಕ್ಷಣೆ:-

ಮಿಶ್ರ ಆರ್ಥಿಕತೆಯಲ್ಲಿ ಇನ್ನೊಂದು ಅನುಭೋಗಿಗಳ ಸಾರ್ವಭೌಮತ್ವವನ್ನು ರಕ್ಷಿಸಲಾಗುತ್ತದೆ. ಅವರ ಮುಕ್ತ ಸ್ವಾತಂತ್ರ್ಯಕ್ಕೆ ಯಾವುದೇ ಅಡ್ಡಿ ಆತಂಕಗಳಿರುವುದಿಲ್ಲ ಅವರು ತಮಗಿಷ್ಟದ ಸರಕುಗಳನ್ನು ಕೊಂಡು ಗರಿಷ್ಠ ತೃಪ್ತಿ ಪಡೆಯಬಹುದು. ಅವರ ಸಾಹುಕಾರರ ವಸ್ತುಗಳಲ್ಲ.

5] ಕಾರ್ಮಿಕರ ಹಿತಾಸಕ್ತಿಯ ರಕ್ಷಣೆ:-

ಮಿಶ್ರ ಆರ್ಥಿಕತೆಯಲ್ಲಿ ಕಾರ್ಮಿಕರ ಹಿತಾಸಕ್ತಿಯನ್ನು ರಕ್ಷಿಸಲಾಗುತ್ತದೆ. ಅವರಿಗೆ ಸಾಮಾಜಿಕ ರಕ್ಷಣೆ ಮತ್ತು ಭದ್ರತೆಗಳನ್ನು ಒದಗಿಸಲು ಸರ್ಕಾರ ಮುಂದಾಗುತ್ತದೆ. ಅವರ ಶೋಷಣೆಯನ್ನು ತಡೆಗಟ್ಟಲು ಸರ್ಕಾರ ಪ್ರಯತ್ನಿಸುತ್ತದೆ.

6] ಏಕಸ್ವಾಮ್ಯ ನಿಯಂತ್ರಣ:-

ಮಿಶ್ರ ಆರ್ಥಿಕತೆಯ ಪ್ರಮುಖ ಧ್ಯೇಯವು ಏಕಸ್ವಾಮ್ಯ ಹತೋಟಿಯ ನಿಯಂತ್ರಣವನ್ನು ಹತೋಟಿ ಮಾಡಿ ಅನುಭೋಗಿಗಳ ಹಿತರಕ್ಷಣೆ ಮಾಡುವುದಾಗಿರುತ್ತದೆ. ಬಂಡವಾಳಶಾಹಿಯಲ್ಲಿ ಏಕಸ್ವಾಮ್ಯ ನಿಯಂತ್ರಣ ಅತ್ಯಧಿಕವಿರುತ್ತದೆ. ಆದರೆ ಇಲ್ಲಿ ಕಡಿಮೆ

-ಗೆ ಕಾರಣವಾಗುತ್ತದೆ.

7) ಆರ್ಥಿಕ ಯೋಜನೆ:-

ಮಿಶ್ರ ಆರ್ಥಿಕತೆಯು ಒಂದು ಯೋಜಿತ ಆರ್ಥಿಕತೆಯಾಗಿರುತ್ತದೆ. ಇಲ್ಲಿ ಒಂದು ಕೇಂದ್ರ ಯೋಜನಾ ಪ್ರಾಧಿಕಾರ ಇರುತ್ತದೆ. ಎಲ್ಲಾ ವಲಯಗಳು ಯೋಜಿತವಾಗಿರುತ್ತದೆ. ಮತ್ತು ಆದ್ಯತೆಗಳ ಗುರಿಯನ್ನು ಹಾಗೂ ಸಾಧಿಸಬೇಕಾದ ಪ್ರಗತಿಯನ್ನು ನಿರ್ಧರಿಸಲಾಗುತ್ತದೆ.

8) ಸ್ವಾತಂತ್ರ್ಯ ಮತ್ತು ನಿಯಂತ್ರಣ:-

ಮಿಶ್ರ ಆರ್ಥಿಕತೆಯು ಉತ್ಪಾದನೆ, ಉಪಭೋಗ ಖಾಸಗಿ ಆಸ್ತಿ, ವೃತ್ತಿಯ ಆಯ್ಕೆ ಮುಂತಾದ ಸ್ವಾತಂತ್ರ್ಯಗಳನ್ನು ನೀಡುತ್ತದೆ. ಇದೇ ವೇಳೆಯಲ್ಲಿ ಅದು ಕೆಲವೊಂದು ನಿಯಂತ್ರಣಗಳನ್ನು ಹೇರಲು ಹಿಂಜರಿಯುವುದಿಲ್ಲ.

9) ಸಾಮಾಜಿಕ ಕ್ಷೇಮಾಭಿವೃದ್ಧಿ:-

ಮಿಶ್ರ ಆರ್ಥಿಕ ವ್ಯವಸ್ಥೆಯು ಜನರ ಗರಿಷ್ಠ ಸಾಮಾಜಿಕ ಕ್ಷೇಮಾಭಿವೃದ್ಧಿಯ ಗುರಿ ಹೊಂದಿರುತ್ತದೆ. ಆದಾಯ ಅಸಮಾನತೆಯ ನಿವಾರಣೆ, ನಿರುದ್ಯೋಗ ಮತ್ತು ಬಡತನದ ಪರಿಹಾರ, ಸಾಮಾಜಿಕ ಭದ್ರತೆಗಳ ಕೊಡಮಾಡುವಿಕೆ, ಸಾರ್ವಜನಿಕ ಆರೋಗ್ಯ, ಸಾರ್ವಜನಿಕ ಶಿಕ್ಷಣ ಮುಂತಾದ ಸೌಲಭ್ಯಗಳನ್ನು ಒದಗಿಸಲು ಮುಂದಾಗುತ್ತದೆ.

ಇದು ಮಿಶ್ರ ಆರ್ಥಿಕತೆಯು ಬಂಡವಾಳಶಾಹಿ ಮತ್ತು ಆಜ್ಞಾವರ್ತಿ ಅಥವಾ ಸಮಾಜವಾದಿ ಆರ್ಥಿಕತೆಗಳಿಗಿಂತ ಭಿನ್ನವಾದ ಗುಣಲಕ್ಷಣಗಳನ್ನು ಹೊಂದಿರುತ್ತದೆ.

ಮಿಶ್ರ ಆರ್ಥಿಕತೆಯ ಗುಣ ಅಥವಾ ಅನುಕೂಲಗಳು
ಅದರ ಪ್ರಮುಖ ಗುಣಗಳು ಅಥವಾ ಅನುಕೂಲಗಳು ಮುಂದಿನಂತಿವೆ.

1) ನಾಗರಿಕರಿಗೆ ಆರ್ಥಿಕ ಸ್ವಾತಂತ್ರ್ಯ
2] ಖಾಸಗಿ ಉತ್ಪಾದನೆಯ ಅಸ್ತಿತ್ವ.
3] ಆವಿಷ್ಕಾರಕ್ಕೆ ಉತ್ತೇಜನ ಮತ್ತು ಬಂಡವಾಳ ಸಂಚಯನ
4] ಬೆಲೆಯಂತ್ರದ ಅಸ್ತಿತ್ವದಿಂದಾಗಿ ಸಂಪನ್ಮೂಲ ದಕ್ಷ ಮತ್ತು ವೈಜ್ಞಾನಿಕ ಹಂಚಿಕೆ.
5] ಯೋಜಿತ ಅಭಿವೃದ್ಧಿಯಿಂದಾಗಿ ಸರಿಯಾದ ದಿಕ್ಕಿನಲ್ಲಿ ಚಲನೆ ಮತ್ತು.
6] ಆರೋಗ್ಯಕರ ಸ್ಪರ್ಧಾತ್ಮಕ ಉತ್ತೇಜನ, ಶಿಕ್ಷಣ ಮತ್ತು ಅನಾರೋಗ್ಯಕರ ಸ್ಪರ್ಧೆಯಿಂದ ನಿಯಂತ್ರಣ.

ಒಟ್ಟಾರೆಯಾಗಿ ಹೇಳುವುದಾದರೆ ಮಿಶ್ರ ಆರ್ಥಿಕತೆಯಲ್ಲಿ ಸರ್ಕಾರಿ ಹಸ್ತಕ್ಷೇಪ ಮತ್ತು ನಿಯಂತ್ರಣದ ಮಿಶ್ರಣ. -ಲ್ಲಿ ಬೆಲೆಯಂತ್ರ ವ್ಯವಸ್ಥೆ ಕೆಲಸ ನಿರ್ವಹಿಸು-ತ್ತದೆ. ಸಾಮಾನ್ಯವಾಗಿ ಉದಾರೀಕೃತ ಮಿಶ್ರ ಆರ್ಥಿಕತೆಯಲ್ಲಿ ಖಾಸಗಿ ವಲಯದ ವಿಸ್ತರಣೆ


ಉಪಸಂಹಾರ :-

ಒಟ್ಟಾರೆಯಾಗಿ ಹೇಳುವುದಾದರೆ ಉತ್ತರ-ಆಧುನಿಕತೆಯಲ್ಲಿ ಸರಳ ಕಟ್ಟಳೆ ಮತ್ತು ನಿಯಂತ್ರಣದ ಮಾದರಿಯಲ್ಲಿ ಜೀವತಂತ್ರದ ವ್ಯವಸ್ಥೆ ರೂಪಿಸಲು ಅವಕಾಶವಾಗುತ್ತದೆ. ಸಾಮಾನ್ಯವಾಗಿ ಉದಾರೀಕೃತ ಉತ್ತರ ಆಧುನಿಕತೆಯಲ್ಲಿ ಮಾನವ ಮೌಲ್ಯದ ಮಿತ್ರರೆಡೆಗೆ ಮೂಲ ಆಧಾರಗಳನ್ನು ಕಲ್ಪಿಸಲಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಸಾರ್ವಜನಿಕ ಮೌಲ್ಯವು ಮಾನವ ಮೌಲ್ಯಕ್ಕೆ ಬೆಂಬಲವಾಗಿ ನಿಲ್ಲುತ್ತದೆ. ಹಾಗು ಅದನ್ನು ಪ್ರೇರೇಪಿಸುತ್ತದೆ. ಈ ಆಧುನಿಕತೆಯಲ್ಲಿ ಯೋಜನಾ ತಂತ್ರವು ಮಾರುಕಟ್ಟೆ ಪ್ರೋತ್ಸಾಹಕ ವಿಧಾನವನ್ನು ಅವಲಂಬಿಸಿರುತ್ತದೆ. ಆದ್ದರಿಂದ ಉದಾರೀಕೃತ ಉತ್ತರ ಆಧುನಿಕತೆಯಲ್ಲಿ ಮಾರುಕಟ್ಟೆ ಯಂತ್ರ ಹಾಗು ಜೀವ ವ್ಯವಸ್ಥೆಯು ಹೆಚ್ಚಿನ ಪ್ರಭಾವ ಹೊಂದಿರುತ್ತದೆ. ಇಂತಹ ಆಧುನಿಕತೆಯಲ್ಲಿ ಮಾನವ ಮೌಲ್ಯದ ಪರಿಮಾಣಗಳು ಜೀವತಂತ್ರ ವ್ಯವಸ್ಥೆಯ ರೂಪ ಪರಿಣಾಮ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಆದರೆ ಸಾರ್ವಜನಿಕ ಮೌಲ್ಯದ ಸಿದ್ಧಾಂತಗಳನ್ನು ಸರಳವಾಗಿ ತೆಗೆದುಕೊಳ್ಳುತ್ತದೆ.

## How Mixed Economies Work

**A mixed economy combines the advantages and disadvantages of three different types of economies: market, command, and traditional economies**

- Government has a large role in the military, international trade, and national transportation
- Driven by the motivation of self interest of individuals
- Allows federal government to safeguard its people and market




the balance

---




## Mixed Economic System

*['mikst ,e-kə-'nä-mik 'si-stəm]*

A system that combines aspects of both capitalism and socialism.

Investopedia




Coordinator IQAC
G. P. PORWAL ARTS, COM &
V. V. SALIMATH Sc. College,
SINDGI-586128.

Principal,
G. P. Porwal Arts, Comm &
V. V. Salimath Sc. College
SINDGI-586128. College Code: 5234